ನಾಲ್ಕಂತಸ್ತಿನ ದೊಡ್ಡ ಕಟ್ಟಡ ಅವರಿಗೆ ಸವಾಲಾಗಿ ತಲೆಯೆತ್ತಿ ನಿಂತಿತ್ತು. ಅವರು ಮನೆಕೆಲಸ ಮಾಡಿಸುತ್ತಿದ್ದ ಮೇಸ್ತ್ರಿಯನ್ನು ಮಾತಾಡಿಸಲು ಹೋದರು.

ಅವನು ಪಕ್ಕಾ ಹಿಂದಿಯಲ್ಲಿ ಮಾತಾಡುತ್ತಿದ್ದ. ಕೆಲಸಗಾರರೂ ಉತ್ತರ ಭಾರತದವರೇ ಆಗಿದ್ದರು. ಕೇಸು ಈಗ ಗೀತಾಳದಾಯಿತು. ಹಿಂದಿಯಲ್ಲಿ ನಿರರ್ಗಳವಾಗಿ ಮಾತಾಡಬಲ್ಲ ಗೀತಾ ಅವನಿಗೆ ತಾವೇ ಮುಂದಿನ ಸೈಟಿನ ಓನರ್ ಎಂದು ಪರಿಚಯಿಸಿಕೊಂಡಳು, ಹೇಳದೆ, ಕೇಳದೆ ತಮ್ಮ ಸೈಟಿನಲ್ಲಿ ಶೆಡ್ಡು ಕಟ್ಟಿಸಿರುವುದು ಸರಿಯಲ್ಲವೆಂದೂ, ಕೂಡಲೇ ತೆರವು ಮಾಡಬೇಕೆಂದೂ ಮನವಿ ಮಾಡಿದಳು. ಅವಳ ಗತ್ತಿಗೆ ಮೇಸ್ತ್ರಿ ವಿಧೇಯನಾದ.

‘ಅಯ್ಯೋ, ನಮ್ಮ ಧಣಿ ಸ್ಮಾರ್ಟ್ ಸಿಟಿ ಇಂಜಿನಿಯರ್ ಮೇಡಂ, ಯಾರ ಮಾತನ್ನೂ ಕೇಳಲ್ಲ. ನಾವಂತೂ ಬಾಯ್ಬಿಂಡಂಗೇ ಇಲ್ಲ. ಒಟ್ಟು ಹತ್ತು ಫ್ಲ್ಯಾಟ್ ಕಟ್ತಿದ್ದಾರೆ. ಎಲ್ಲ ಬಾಡಿಗೆಗಂತೆ. ಸುತ್ತ ಮುತ್ತಲಿನವರತ್ರ ಆವಯ್ಯಂದು ಸಿಕ್ಕಾಪಟ್ಟೆ ಗಲಾಟೆ. ನಂಗಂತೂ ಸಾಕಾಗಿ ಹೋಗಿದೆ. ನೀವ್ ಬಂದು ಕೇಳ್ತಿರೋದು ಒಳ್ಳೇದೇ ಆಯ್ತು. ಯಾವುದಕ್ಕೂ ಒಂದ್ಸಾರಿ ಸೆಟ್ ಬ್ಯಾಕ್ ಎಷ್ಟು ಬಿಟ್ಟಿದ್ದಾರೆ ಅಂತಲೂ ಅಳ್ಕೊಂಬಿಡಿ. ಬರೀ ನೆಲ ನೋಡ್ಬೇಡಿ, ಮೇಲೆದ್ದಿರೋ ನಾಲ್ಕೂ ಅಂತಸ್ತುಗಳು ನಿಧಾನವಾಗಿ ನಿಮ್ಕಡೇಗೇ ವಾಲಿವೆ ನೋಡಿ’ ಅಂದ.

ತಲೆಯೆತ್ತಿದರೆ, ಅವರ ಸೈಟಿನ ಮೇಲೇ ಬೀಳುವಂತೆ ಕಟ್ಟಡ ಮೇಲೇಳುತ್ತಿತ್ತು. ಅದನ್ನು ನೋಡಿ ಅವರಿಬ್ಬರ ಕರುಳುಗಳು ಚುರುಕ್ ಎಂದವು. ಮೇಸ್ತ್ರಿಯ ಬಳಿ ಆ ಮಾಲೀಕನ ನಂಬರ್ ಪಡೆದರು. ಲೋಕಾರೂಢಿಯನ್ನು ಅರಿತಿದ್ದ ಗೀತಾ, ‘ಗಂಡಸರೇ ಮಾತಾಡಿದರೆ ಚೆಂದ, ನೀವೇ ಮಾತಾಡಿ’ ಎಂದು ಮೂರ್ತಿಗೆ ಹೇಳಿದಳು.

ಮೂರ್ತಿ ಇಲ್ಲವೆನ್ನಲಾಗದೆ ಕರೆ ಮಾಡಿದ. ‘ಯಾರ್ರಿ ಇದು? ಏನಾಗ್ಬೇಕು?’ ಅನ್ನೋ ಜೋರು ಧ್ವನಿಯನ್ನು ಕೇಳಿದ ಕೂಡಲೇ ಅವನ ಜಂಘಾಬಲ ಅಳ್ಳಕವಾಗಿ ಹೋಯ್ತು. ‘ಸಾರ್ ದಯವಿಟ್ಟು ಇದನ್ನೆಲ್ಲ ನಮ್ಮ ಸೈಟಿಂದ ತೆಗೆಸಿಬಿಡಿ’ ಎಂದು ಅಂಗಲಾಚುವ ಧ್ವನಿಯಲ್ಲಿ ಕೇಳಿಕೊಂಡ.

‘ಓ ಅಷ್ಟೇನಾ? ಇರ್ಲಿಬಿಡಿ, ತೆಗ್ಸಿದ್ರಾಯ್ತು...’ ಅಂತ ಅತ್ತ ಕಡೆಯಿಂದ ಫೋನ್ ಕಟ್ಟಾಯಿತು. ಮೂರ್ತಿ ಆ ವೇಳೆಗೆ ಅಪರಾಧ ಮಾಡಿದಂತೆ ಬೆವರುತ್ತಿದ್ದ.

‘ನಾವು ನಮ್ಮ ಸೈಟಿನ ಸುತ್ತ ಕಾಂಪೌಂಡ್ ಹಾಕ್ಸಬೇಕಂತ ಇದ್ದೀವಿ, ಅರ್ಜೆಂಟಾಗಿ ತೆರವು ಮಾಡಿ ಅಂತ ಹೇಳಲೇ ಇಲ್ಲವಲ್ಲ?’ ಅಂತ ಗೀತಾ ನೆನಪಿಸಿದಳು.

‘ಏ... ಇಲ್ಲ ಬಿಡು ತೆಗೆಸ್ತಾರಂತೆ... ಕೆಲ್ಸದಲ್ಲಿರ್ಬೇಕು... ಹೆ... ಹೆ...’ ಎಂದ ಮೂರ್ತಿ ‘ಎಂಥಾ ಸೆಕೆ’ ಎಂದು ಕರ್ಚೀಫಿನಿಂದ ಬೆವರೊರೆಸಿಕೊಂಡ.

‘ಹಾಗಾದ್ರೆ, ಸಾಯಂಕಾಲ ಆಫೀಸಿನ ಸಮಯ ಮುಗಿದ ಮೇಲೆ ಮತ್ತೊಮ್ಮೆ ಫೋನು ಮಾಡಿ’ ಎಂದ ಗೀತಾ ತಣ್ಣಗೆ ಪ್ರತಿಕ್ರಿಯಿಸಿದ್ದನ್ನು ನೋಡಿ, ‘ಇನ್ನು ನನ್ನನ್ನು ಬಿಡುವವಳಲ್ಲ’ ಅಂದುಕೊಂಡ ಮೂರ್ತಿ ಸಂಜೆಯವರೆಗೂ ಟೆನ್ಶನ್ ಇಲ್ಲ ಎಂದು ನಿಟ್ಟುಸಿರುಬಿಟ್ಟ. ಅಕ್ಕನ ಮನೆಯಲ್ಲಿ ಉಂಡು, ನೆಮ್ಮದಿಯಾಗಿ ಮಲಗಿಬಿಟ್ಟ.

ಸಾಯಂಕಾಲ ಏಳಕ್ಕೆ ಮತ್ತೆ ಫೋನು ಹಚ್ಚಲು ಗೀತಾ ನೆನಪಿಸಿದಳು. ಮೂರ್ತಿ ಫೋನಾಯಿಸಿದ. ಮತ್ತೆ, ‘ಸರ್, ಬ್ಬೆ... ಬ್ಬೆ... ಬ್ಬೆ...’ ಎನ್ನುತ್ತಿದ್ದವನಿಗೆ ಅತ್ತ ಕಡೆಯ ಧ್ವನಿ, ‘ತೆಗ್ಸಿದ್ರಾಯ್ತು ಅಂತ ಹೇಳ್ಲಿಲ್ವೇನ್ರಿ? ಹೊತ್ತು ಗೊತ್ತು ಇಲ್ದಂಗೆ ಫೋನ್ ಮಾಡ್ತೀರ... ಇಡ್ರಿ ಫೋನು’ ಅಂತ ಬೈಯಿತು, ಫೋನ್ ಕಟ್ಟಾಯಿತು. ಅದನ್ನು ಶಿರಸಾವಹಿಸಿ ಪಾಲಿಸಿದ ಮೂರ್ತಿ ಹೆಂಡತಿಯೆಡೆ ನೋಡಿದ. ‘ಹ್ಞೂ...’ ಎಂದ ಗೀತಾ ಗಂಡನಿಂದ ಫೋನ್ ತಗೊಂಡಳು. ಮತ್ತೆ ರಿಂಗ್ ಮಾಡಿದಳು. ಅತ್ತ ಕಡೆಯಿಂದ ದಿವ್ಯ ನಿರ್ಲಕ್ಷ್ಯ ಮಾತ್ರವೇ ಉತ್ತರವಾಯಿತು.

ಗೀತಾ ಕುದ್ದು ಹೋದಳು. ಮೆತ್ತಗೆ ಮಾತಾಡಿದ ಎನ್ನುವ ಒಂದೇ ಕಾರಣಕ್ಕೆ ‘ಬಡಪಾಯಿಗಳು’ ಎಂದು ನಿರ್ಲಕ್ಷ್ಯ ತೋರಿದ ಎಂಜಿನಿಯರನ ಬಗ್ಗೆ ಅವಳಿಗೆ ಅಸಮಾಧಾನವಾಗಿತ್ತು.

ಒಂದಿಷ್ಟೂ ಶಿಷ್ಟಾಚಾರ ತೋರಿಸದೆ ತಮ್ಮ ಮನೆಯಂಗಳಕ್ಕೆ ಬಂದು ಕೂತು ತಮ್ಮ ಮೇಲೇ ಜೋರು ಮಾಡುತ್ತಿರುವ, ಎಂಜಿನಿಯರನ ನಡವಳಿಕೆ ನೈತಿಕವಾಗಿ ಸರಿಯಿಲ್ಲದ ಮೇಲೆ ಅವನನ್ನು ತಮ್ಮ ಜಾಗದಲ್ಲಿ ಹೆಚ್ಚು ದಿನ ಕೂರಿಸಿಕೊಳ್ಳುವುದು ಅಪಾಯ ಅನ್ನಿಸಿತು. ‘ಸರ್ಕಾರ್’ ಎಂದಿದ್ದ ಅವನ ನಂಬರನ್ನು ತನ್ನ ಫೋನಿಗೆ ಹಾಕಿಕೊಂಡು ರಿಂಗ್ ಮಾಡಿದಳು.

ಹೊಸ ನಂಬರಿನಿಂದ ಬಂದ ಕರೆಗೆ ಉತ್ತರಿಸಿದ ಸರ್ಕಾರ್ ಅತ್ತ ಕಡೆಯಿಂದ ‘ಹಲ್ಲೋ’ ಎಂದ.

‘ಏ ಸರ್ಕಾರ್ ಬೋಳೀಮಗನೆ... ಫೋನ್ ಮಾಡಿದ್ರೆ